**All India Radio: Bangalore**
**National Bulletins In Kannada**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**17.06.2025 / 7.35am**

**<><*<><>*><>**

<u>ಮುಖ್ಯಾಂಶಗಳು</u>

ಮುಖ್ಯಾಂಶಗಳು

೧. ಭಯೋತ್ಪಾದನೆ, ಹಿಂಸಾತ್ಮಕ ಉಗ್ರವಾದ ಖಂಡಿಸಿದ ಭಾರತ - ಸೈಪ್ರಸ್

೨. ದೇಶದಲ್ಲಿ ಹೊಸದಾಗಿ ಎರಡು ಸಾವಿರ ಚಾಲನಾ ತರಬೇತಿ ಶಾಲೆ ತೆರೆಯಲು ಕೇಂದ್ರ ಸರ್ಕಾರ ನಿರ್ಧಾರ

೩. ಇಸ್ರೇಲ್ ರಾಜಧಾನಿ ಟೆಲ್ ಅವೀವ್ ಮೇಲೆ ಇರಾನ್ ದಾಳಿ

೪. ಎಎಫ್‌ಸಿ ಮಹಿಳಾ ಏಷಿಯನ್ ಕಪ್ ಫುಟ್‌ಬಾಲ್; ಭಾರತೀಯ ಹಿರಿಯ ಮಹಿಳಾ ತಂಡ ಪ್ರಕಟ

**><><><><><><><><**

ಭಯೋತ್ಪಾದನೆ ಮತ್ತು ಹಿಂಸಾತ್ಮಕ ಉಗ್ರವಾದವನ್ನು ಅದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ಭಾರತ ಮತ್ತು ಸೈಪ್ರಸ್ ಸ್ಪಷ್ಟವಾಗಿ ಖಂಡಿಸಿವೆ. ಅಲ್ಲದೇ, ಶಾಂತಿ ಮತ್ತು ಸ್ಥಿರತೆಯನ್ನು ಹಾಳುಮಾಡುವ ಮಿಶ್ರ ಬೆದರಿಕೆಗಳನ್ನು ಎದುರಿಸಲು ತಮ್ಮ ಹಂಚಿಕೆಯ ಬದ್ಧತೆಯನ್ನು ಪುನರುಚ್ಚರಿಸಿವೆ. ಎಲ್ಲಾ ರಾಷ್ಟ್ರಗಳು ಇತರೆ ರಾಷ್ಟ್ರಗಳ ಸಾರ್ವಭೌಮತ್ವವನ್ನು ಗೌರವಿಸುವಂತೆ ಉಭಯ ದೇಶಗಳು ಒತ್ತಾಯಿಸಿದವು ಮತ್ತು ಭಯೋತ್ಪಾದನೆಗೆ ಹಣಕಾಸು ಒದಗಿಸುವ ಜಾಲಗಳನ್ನು ನಿಷ್ಕ್ರಿಯಗೊಳಿಸುವುದು, ಸುರಕ್ಷಿತ ತಾಣಗಳನ್ನು ನಿರ್ಮೂಲನೆ ಮಾಡುವುದು, ಭಯೋತ್ಪಾದಕ ಮೂಲಸೌಕರ್ಯವನ್ನು ಕಿತ್ತುಹಾಕುವುದು ಮತ್ತು ಭಯೋತ್ಪಾದನೆಯ ಅಪರಾಧಿಗಳ ವಿರುದ್ಧ ತ್ವರಿತ ಕಾನೂನು ಕ್ರಮಕ್ಕೆ ಒತ್ತಾಯಿಸಿದವು. ಪ್ರಧಾನಿ ನರೇಂದ್ರ ಮೋದಿ ಮತ್ತು ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋ ಡೌಲೈಡ್ಸ್ ನಡುವಿನ ನಿಯೋಗ ಮಟ್ಟದ ಮಾತುಕತೆಯ ನಂತರ

ಹೊರಡಿಸಲಾದ ಜಂಟಿ ಘೋಷಣೆಯಲ್ಲಿ, ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸಲು ಸಮಗ್ರ, ಸಂಘಟಿತ ಮತ್ತು ನಿರಂತರ ವಿಧಾನದ ಅಗತ್ಯವನ್ನು ಎರಡೂ ರಾಷ್ಟ್ರಗಳು ಒತ್ತಿ ಹೇಳಿದವು. ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಸೈಪ್ರಸ್, ಭಾರತಕ್ಕೆ ಅಚಲ ಬೆಂಬಲವನ್ನು ವ್ಯಕ್ತಪಡಿಸಿತು. ಇತ್ತೀಚಿನ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ನಾಗರಿಕರ ಭೀಕರ ಹತ್ಯೆಯನ್ನು ಇಬ್ಬರೂ ನಾಯಕರು ಬಲವಾಗಿ ಖಂಡಿಸಿದರು ಮತ್ತು ದಾಳಿಗಳಿಗೆ ಕಾರಣರಾದವರನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಪ್ರತಿಪಾದಿಸಿದರು. ಭಯೋತ್ಪಾದನೆಯನ್ನು ಎದುರಿಸಲು ಬಹುಪಕ್ಷೀಯ ಪ್ರಯತ್ನಗಳನ್ನು ಬಲಪಡಿಸುವ ಬದ್ಧತೆಯನ್ನು ಉಭಯ ನಾಯಕರು ಪುನರುಚ್ಚರಿಸಿದರು. ಪ್ರಸ್ತುತ ಜಾಗತಿಕ ಬಿಕ್ಕಟ್ಟುಗಳ ದೃಷ್ಟಿಯಿಂದ, ತುರ್ತು ಸಿದ್ಧತೆ ಮತ್ತು ಸಂಘಟಿತ ಬಿಕ್ಕಟ್ಟಿನ ಪ್ರತಿಕ್ರಿಯೆಯಲ್ಲಿ ಸಹಕಾರವನ್ನು ಬಲಪಡಿಸುವ ಬಗ್ಗೆ ಎರಡೂ ಕಡೆಯವರು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಸೈಪ್ರಸ್ ಮತ್ತು ಭಾರತದ ನಡುವೆ ವಿಜ್ಞಾನ, ನಾವೀನ್ಯತೆ ಮತ್ತು ಸಂಶೋಧನೆಯಲ್ಲಿ ಹೆಚ್ಚಿದ ವ್ಯಾಪಾರ, ಹೂಡಿಕೆ ಮತ್ತು ಸಹಯೋಗದ ಮೂಲಕ ಆರ್ಥಿಕ ಸಂಬಂಧಗಳನ್ನು ವಿಸ್ತರಿಸುವ ಬದ್ಧತೆಯನ್ನು ಉಭಯ ನಾಯಕರು ವ್ಯಕ್ತಪಡಿಸಿದರು.

><><><><><><><><><

ಸೈಪ್ರಸ್‌ಗೆ ಐತಿಹಾಸಿಕ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೈಪ್ರಸ್ ಗಣರಾಜ್ಯದ ಅತ್ಯುನ್ನತ ನಾಗರಿಕ ಗೌರವವಾದ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ಮಕರಿಯೋಸ್ III' ಅನ್ನು ಪ್ರದಾನ ಮಾಡಲಾಯಿತು. ಈ ಮನ್ನಣೆಯು ಪ್ರಧಾನ ಮಂತ್ರಿಯವರು ಪಡೆದ ಅಂತಾರಾಷ್ಟ್ರೀಯ ಪುರಸ್ಕಾರಗಳ ಪಟ್ಟಿಗೆ ಸೇರ್ಪಡೆಯಾಗಿದೆ. ಈ ಗೌರವವು ತಮಗೆ ಮಾತ್ರವಲ್ಲ, ಭಾರತದ ೧೪೦ ಕೋಟಿ ಜನರಿಗೆ ಸಲ್ಲುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಎರಡು ದಶಕದಲ್ಲಿ ಭಾರತೀಯ ಪ್ರಧಾನಿಯೊಬ್ಬರು ಸೈಪ್ರಸ್‌ಗೆ ನೀಡಿದ ಮೊದಲ ಭೇಟಿ ಇದಾಗಿದೆ.

><><><><><><><><><

ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಹಣಕಾಸು ಕ್ರಿಯಾ ಕಾರ್ಯಪಡೆ-ಎಫ್‌ಎಟಿಎಫ್ ಖಂಡಿಸಿದ್ದು, ಆರ್ಥಿಕ ಬೆಂಬಲವಿಲ್ಲದೆ ಈ ದಾಳಿ ನಡೆದಿರಲು ಸಾಧ್ಯವಿಲ್ಲ ಎಂದು ಹೇಳಿದೆ. ಪಹಲ್ಗಾಮ್

ದಾಳಿ ಮತ್ತು ಇತ್ತೀಚಿನ ಇತರೆ ದಾಳಿಗಳು ಭಯೋತ್ಪಾದಕ ಬೆಂಬಲಿಗರ ನಡುವೆ ಹಣ ಮತ್ತು ಸಾಧನಗಳ ವಿನಿಮಯವಿಲ್ಲದೇ ನಡೆಯಲು ಸಾಧ್ಯವಿಲ್ಲ ಎಂದು ಎಫ್‌ಎಟಿಎಫ್ ತಿಳಿಸಿದೆ. ಯಾವುದೇ ಒಂದು ಕಂಪನಿ, ಪ್ರಾಧಿಕಾರ ಅಥವಾ ದೇಶವು ಭಯೋತ್ಪಾದನೆಯ ಸವಾಲನ್ನು ಏಕಾಂಗಿಯಾಗಿ ಎದುರಿಸಲು ಸಾಧ್ಯವಿಲ್ಲ. ಜಾಗತಿಕ ಭಯೋತ್ಪಾದನೆಯ ಪಿಡುಗಿನ ವಿರುದ್ಧ ಜಗತ್ತು ಒಗ್ಗೂಡಬೇಕು ಎಂದು ಎಫ್‌ಎಟಿಎಫ್ ಅಧ್ಯಕ್ಷೆ ಎಲಿಸಾ ಡಿ ಅಂಡಾ ಮದ್ರಾಜೊ ಹೇಳಿದ್ದಾರೆ.

><><><><><><><><

ದೇಶದ ವಿವಿಧ ಭಾಗಗಳಲ್ಲಿ ಎರಡು ಸಾವಿರ ಚಾಲನಾ ತರಬೇತಿ ಶಾಲೆಗಳನ್ನು ತೆರೆಯಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ದೇಶದ ಹಿಂದುಳಿದ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಈ ತರಬೇತಿ ಶಾಲೆಗಳನ್ನು ತೆರೆಯಲಾಗುವುದು ಎಂದು ಹೇಳಿದರು. ಇದು ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ದೇಶದಲ್ಲಿ ಸುಮಾರು ೨೨ ಲಕ್ಷ ಚಾಲಕರ ಕೊರತೆಯಿದೆ ಮತ್ತು ಈ ತರಬೇತಿ ಶಾಲೆಗಳು ಕೌಶಲ್ಯಪೂರ್ಣ ಚಾಲಕರ ಕೊರತೆಯನ್ನು ಪೂರೈಸಲು ಸಹಾಯ ಮಾಡುತ್ತದೆ ಎಂದರು. ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಹೇಳಿದ ಸಚಿವ ನಿತಿನ್ ಗಡ್ಕರಿ, ಸಂಚಾರ ನಿಯಮಗಳನ್ನು ಪಾಲಿಸುವಂತೆ ಜನರಿಗೆ ಮನವಿ ಮಾಡಿದರು.

><><><><><><><><

ಈ ಬಾರಿ ಬುಡಕಟ್ಟು ಪ್ರದೇಶಗಳಲ್ಲಿ ಇದೇ ೨೧ ರಂದು ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ಆಧುನಿಕ ಯೋಗದೊಂದಿಗೆ ಸ್ಥಳೀಯ ಯೋಗ ಪದ್ಧತಿಗಳ ವಿಶಿಷ್ಟವಾದ ಸಮ್ಮಿಲನವನ್ನು ಎತ್ತಿ ತೋರುತ್ತದೆ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಜುವಾಲ್ ಓರಾಮ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಚಿವರು, ಯೋಗ ಪ್ರದರ್ಶನಗಳು, ಯೋಗ ಅಧಿವೇಶನಗಳು ಮತ್ತು ಜಾಗೃತಿ ಕಾರ್ಯಕ್ರಮಗಳ ಮೂಲಕ ಬುಡಕಟ್ಟು ಸಮುದಾಯಗಳು ಸಕ್ರಿಯವಾಗಿ ಭಾಗವಹಿಸುವುದನ್ನು

ಪ್ರೋತ್ಸಾಹಿಸಿದರು. ಯೋಗ ಕೇವಲ ಒಂದು ವ್ಯಾಯಾಮವಲ್ಲ. ದೇಹ, ಮನಸ್ಸು ಮತ್ತು ಆತ್ಮದ ನಡುವಿನ ಸಾಮರಸ್ಯದ ಮಾರ್ಗವಾಗಿದೆ. ಪ್ರಕೃತಿ ಮತ್ತು ಸಾಂಪ್ರದಾಯಿಕ ಗುಣಪಡಿಸುವ ಪದ್ಧತಿಗಳೊಂದಿಗೆ ಬುಡಕಟ್ಟು ಸಮುದಾಯಗಳು ಆಳವಾದ ಬೇರೂರಿರುವ ಸಂಪರ್ಕವನ್ನು ಹೊಂದಿದ್ದು, ಈ ಸಾಮರಸ್ಯವನ್ನು ಸಾಕಾರಗೊಳಿಸುತ್ತವೆ ಎಂದು ಅವರು ಹೇಳಿದರು. ಯೋಗ ದಿನಾಚರಣೆಯ ಭಾಗವಾಗಿ, ೪೭೭ ಏಕಲವ್ಯ ಮಾದರಿ ವಸತಿ ಶಾಲೆಗಳ ಸುಮಾರು ಒಂದು ಲಕ್ಷ ೪೦ ಸಾವಿರ ವಿದ್ಯಾರ್ಥಿಗಳು ಮತ್ತು ೧೦ ಲಕ್ಷಕ್ಕೂ ಹೆಚ್ಚು ಬುಡಕಟ್ಟು ನಾಗರಿಕರು ಮುಂಬರುವ ಯೋಗ ಅಧಿವೇಶನಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಚಿವ ಜುವಾಲ್ ಓರಾಮ್ ತಿಳಿಸಿದರು.

><><><><><><><><

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ತತ್ವದ ಮೇಲೆ ಕಾರ್ಯನಿರ್ವಹಿಸುತ್ತಿದೆ ಮತ್ತು ಜನಗಣತಿಯ ಜೊತೆಗೆ ಜಾತಿವಾರು ಜನಗಣತಿ ನಡೆಸುವ ನಿರ್ಧಾರವು ಅದಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ಹಿರಿಯ ನಾಯಕ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ ಬುಧು ನೋನಿಯಾ ಅವರ ೧೦೦ ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಪಾಟ್ನಾದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಜನಗಣತಿಯ ಅಧಿಸೂಚನೆ ಹೊರಡಿಸಲಾಗಿದೆ ಮತ್ತು ದಿನಾಂಕಗಳನ್ನು ಘೋಷಿಸಲಾಗಿದೆ. ಇದು ಮೋದಿ ಸರ್ಕಾರವು ಮಾತಿನಂತೆ ನಡೆಯುತ್ತದೆ ಎಂಬುದನ್ನು ಸಾಬೀತುಪಡಿಸುತ್ತದೆ ಎಂದರು. ಬಡವರ ಕಲ್ಯಾಣಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಎಲ್ಲಾ ನಿರಾಶ್ರಿತ ವ್ಯಕ್ತಿಗಳ ಸಮೀಕ್ಷೆ ನಡೆಸಿ, ಮನೆಗಳನ್ನು ಒದಗಿಸಲಾಗುವುದು ಎಂದು ಭರವಸೆ ನೀಡಿದರು.

><><><><><><><><

ಇಸ್ರೇಲ್‌ನ ರಾಜಧಾನಿ ಟೆಲ್ ಅವೀವ್ ಮತ್ತು ಬಂದರು ನಗರ ಹೈಫಾ ಮೇಲೆ ಇರಾನಿನ ಕ್ಷಿಪಣಿಗಳು ದಾಳಿ ಮಾಡಿ, ಮನೆಗಳನ್ನು ನಾಶಪಡಿಸಿ, ನಾಗರಿಕರನ್ನು ಹತ್ಯೆ ಮಾಡಿವೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಎರಡೂ ರಾಷ್ಟ್ರಗಳ ನಡುವಿನ ಸಂಘರ್ಷ ಸತತ ನಾಲ್ಕನೇ

ದಿನ ಮುಂದುವರಿದಿದ್ದು, ಟೆಹ್ರಾನ್‌ನಲ್ಲಿರುವ ಇರಾನಿನ ಸರ್ಕಾರಿ ಸ್ವಾಮ್ಯದ ಮಾಧ್ಯಮ ಕಂಪನಿಗಳಿಗೆ ಸೇರಿದ ಕಟ್ಟಡಗಳ ಮೇಲೆ ಇಸ್ರೇಲ್ ದಾಳಿ ಮಾಡಿದೆ. ನೇರ ಪ್ರಸಾರದ ಸಮಯದಲ್ಲೇ ಈ ದಾಳಿ ನಡೆದಿದೆ. ಹೆಚ್ಚುತ್ತಿರುವ ಘರ್ಷಣೆಯು ಗಲ್ಫ್ ರಾಷ್ಟ್ರಗಳಿಂದ ತುರ್ತು ರಾಜತಾಂತ್ರಿಕ ಪ್ರಯತ್ನಗಳಿಗೆ ಕಾರಣವಾಗಿದೆ. ವಿಶಾಲ ಪ್ರಾದೇಶಿಕ ಸಂಘರ್ಷದ ಸಾಧ್ಯತೆಯ ಬಗ್ಗೆ ಜಿ೭ ಶೃಂಗಸಭೆಯಲ್ಲಿ ಸಭೆ ಸೇರುತ್ತಿರುವ ವಿಶ್ವ ನಾಯಕರಲ್ಲಿ ಕಳವಳ ವ್ಯಕ್ತವಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

><><><><><><><><

ಫುಟ್‌ಬಾಲ್‌ನಲ್ಲಿ, ಭಾರತೀಯ ಹಿರಿಯ ಮಹಿಳಾ ತಂಡದ ಮುಖ್ಯ ತರಬೇತುದಾರ ಕ್ರಿಸ್ಪಿನ್ ಚೆಟ್ರಿ ಅವರು **AFC** ಮಹಿಳಾ ಏಷ್ಯನ್ ಕಪ್ ಆಸ್ಟ್ರೇಲಿಯಾ ೨೦೨೬ ಅರ್ಹತಾ ಪಂದ್ಯಗಳಿಗಾಗಿ ಥೈಲ್ಯಾಂಡ್‌ಗೆ ಪ್ರಯಾಣಿಸುವ ೨೪ ಸದಸ್ಯರ ತಂಡವನ್ನು ಘೋಷಿಸಿದ್ದಾರೆ. ಅರ್ಹತಾ ಪಂದ್ಯಗಳಿಗಾಗಿ ೨೩ ಆಟಗಾರ್ತಿಯರ ಅಂತಿಮ ತಂಡವನ್ನು ಮೊದಲ ಪಂದ್ಯಕ್ಕೂ ಮೊದಲು ದೃಢೀಕರಿಸಲಾಗುತ್ತದೆ. ಈ ತಂಡವು ಜೂನ್ ೨೩ ರಂದು ಮಂಗೋಲಿಯಾ, ಜೂನ್ ೨೯ ರಂದು ಟಿಮೋರ್ ಲೆಸ್ಟೆ, ಜುಲೈ ೨ ರಂದು ಇರಾಕ್ ಮತ್ತು ಜುಲೈ ೫ ರಂದು ಆತಿಥೇಯ ಥೈಲ್ಯಾಂಡ್ ತಂಡಗಳನ್ನು ಎದುರಿಸಲಿದೆ. ಗುಂಪು ವಿಜೇತರು ಮಾರ್ಚ್ ೨೦೨೬ ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯುವ ಅಂತಿಮ ಪಂದ್ಯಾವಳಿಗೆ ಅರ್ಹತೆ ಪಡೆಯುತ್ತಾರೆ. ೨೦೨೭ ರ ಬ್ರೆಜಿಲ್‌ನಲ್ಲಿ ನಡೆಯುವ ಫಿಫಾ ಮಹಿಳಾ ವಿಶ್ವಕಪ್‌ಗೆ ಅರ್ಹತಾ ಪಂದ್ಯವಾಗಿಯೂ ಮಹಿಳಾ ಏಷ್ಯನ್ ಕಪ್ ಕಾರ್ಯನಿರ್ವಹಿಸುತ್ತದೆ.

><><><><><><><><

ಫುಟ್‌ಬಾಲ್‌ನಲ್ಲಿ, ಭಾರತ ೨೩ ವರ್ಷದೊಳಗಿನ ಪುರುಷರ ತಂಡದ ಮುಖ್ಯ ತರಬೇತುದಾರ ನೌಶಾದ್ ಮೂಸಾ ಅವರು ತಜಿಕಿಸ್ತಾನ್ ಮತ್ತು ಕಿರ್ಗಿಸ್ತಾನ್ ಗಣರಾಜ್ಯ ವಿರುದ್ಧದ ಸೌಹಾರ್ದ ಪಂದ್ಯಗಳಿಗೆ ೨೩ ಸದಸ್ಯರ ತಂಡವನ್ನು ಪ್ರಕಟಿಸಿದ್ದಾರೆ. ಭಾರತವು ತಜಿಕಿಸ್ತಾನ್‌ನ ರಾಜಧಾನಿ ದುಶಾ ನ್ಬೆ ಬಳಿಯ ಹಿಸೋರ್‌ನಲ್ಲಿರುವ ಹಿಸೋರ್ ಸೆಂಟ್ರಲ್ ಕ್ರೀಡಾಂಗಣದಲ್ಲಿ ನಾಳೆ ರಾತ್ರಿ ೮:೩೦ಕ್ಕೆ ತಜಿಕಿಸ್ತಾನ್ ತಂಡವನ್ನು ಎದುರಿಸಲಿದೆ. ನಂತರ ಜೂನ್ ೨೧ ರಂದು ಕಿರ್ಗಿಸ್ತಾನ್

ಗಣರಾಜ್ಯವನ್ನು ಎದುರಿಸಲಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ **AFC Under** ೨೩ ಏಷ್ಯನ್ ಕಪ್ ೨೦೨೬ ಅರ್ಹತಾ ಪಂದ್ಯಗಳಿಗೆ ಸಿದ್ಧತೆಯ ಭಾಗವಾಗಿ, ಭಾರತವು ತಜಿಕಿಸ್ತಾನ್ ಮತ್ತು ಕಿರ್ಗಿಸ್ತಾನ್ ಗಣರಾಜ್ಯವನ್ನು ಎದುರಿಸಲಿದೆ.

><><><><><><><><><

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>